(SRI N. HUTCHAMASTHY GOWDA)

instruments, agreements, security bonds, mortgage deeds, affidavits executed by the individual artisans in favour of the Mysore State Khadi and Village Industries Board; under section 9 (2) of the Mysore Stamp Act, 1957.

Sri AZEEZ SAIT (Minister for Labour).—I lay:

Notification No. S.O. 2311 dated 3rd-7th December 1972,

Reduction of tax payable under the Mysore Motor Vehicles Taxation Act, 1957 in respect of vehicles registered in the States of Andhra and Maharashtra and engaged in the transportation of sugarcane from the fields situated in Mysore State to the Bidar Sahakara Sakkare Karkhane Limited, Bidar; under sub-section (2) of section 16 of the Mysore Motor Vehicles Taxation Act, 1957."

Sri K. H. PATIL (Minister for Agriculture and Forests).—I lay:

" Notification No. AF 204 AMS 67 dated.... February, 1973;

Cotton Transport (Mysore) Amendmeni Rules, 1973; under section 8 of the Cotton Transport Act 1923 (Central Act No. 3 of 1923)."

Mr. DEPUTY SPEAKER.—All the Papers are laid.

First Report of the Committee on Public Accounts

Presentation

Sri H. D. DEVE GOWDA (Holenarsipur).—I present:

" First Report of the Committee on Public Accounts on the Appropriation and Finance Accounts 1968-69 and the Audit Report (Civil) 1970."

Mr. DEPUTY SPEAKER.—The Report is presented.

Alleged inconveniences caused to people while collecting lease etc. in Thirthahalli

2-30 P.M.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ತೀರ್ಥಹಳ್ಳಿ ತಾಲ್ಲೂಕಿನ ಮುಜರಾಯಿ ಗೇಣಿದಾರರಿಗೆ ಸಂಬಂಧಪಟ್ಟಂತೆ ಮೂರು ವರ್ಷಕ್ಕೆ ಸಂಬಂಧಪಟ್ಟ ಗೇಣಿ ಮುಂತಾದುದವನ್ನು ಒಂದೇ ಸಲ ವಸೂಲು ಮಾಡುವುದಕ್ಕೆ ಹೋಗಿ ಕಿರುಕುಳ ಕೊಡುತ್ತಿದ್ದಾರೆ ಆದರ ಬಗ್ಗೆ ಮಾನ್ಯ ಕಂದಾಯ ಸಚಿವರು ತಿಳಿಸಬೇಕೆಂದು ಕೇಳುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಕೋಣಂದೂರು ಲಿಂಗಪ್ಪನವರು ತಿಳಿಸಿದ ಕೂಡಲೇ ನಾನು ಜಿಲ್ಲಾಧಿಕಾರಿಗಳನ್ನು ಫೋನ್‌ನಲ್ಲಿ ಕಾಂಟ್ಯಾಕ್ಟ್ ಮಾಡಿ ಇಂಥ ಪರಿಸ್ಥಿತಿ ಇದೆ ಎಂದು ಗೊತ್ತಾಗಿದೆ, ಅಲ್ಲಿಯ ರೈತರಿಗೆ ಯಾವ ವಿಧದಲ್ಲಿಯೂ ಕಿರುಕುಳ ಕೊಡತಕ್ಕದ್ದನ್ನು ಅಥವಾ ತೊಂದರೆ ಕೊಡತಕ್ಕದ್ದನ್ನು ಮಾಡಬಾರದೆಂದು ಸ್ಪಷ್ಟವಾಗಿ ತಿಳಿಸಿದ್ದೇನೆ. ಈಗಾಗಲೇ ಶ್ರೀ ಲಿಂಗಪ್ಪನವರು ತಿಳಿಸಿದಹಾಗೆ ಗೇಣಿದಾರರಿಂದ ಹಿಂದೆ ಇದ್ದ ಜೋಡಿದಾರರು ಗೇಣಿಯನ್ನು ತೆಗೆದುಕೊಂಡು ಬಿಟ್ಟಿದ್ದಾರೆ ಎಂದು ನನಗೆ ಗೊತ್ತಾಗಿದೆ. ಆದರೆಲ್ಲ ಎಷ್ಟರಮಟ್ಟಿಗೆ ನಿಜವಿದೆ, ಆ ಗೇಣಿದಾರರಿಂದ ವಸೂಲು ಮಾಡಿದ್ದಾರೆಯೇ ಇಲ್ಲವೇ, ಈ ವಿಷಯಗಳನ್ನೆಲ್ಲ ತಿಳಿದುಕೊಂಡು ಕಂದಾಯ ಮತ್ತು ಗೇಣಿ ವಸೂಲು ಮಾಡುವುದರಲ್ಲಿ ತೊಂದರೆ ಕೊಡ ಬಾರದೆಂದು ತಿಳಿಸಿದ್ದೇನೆ. ಆ ರೀತಿ ನಮ್ಮ ಅಧಿಕಾರಿಗಳು ಮಾಡುತ್ತಿದ್ದಾರೆಂದು ನಾನು ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

STATEMNT BY THE CHIEF MINISTER

re : **Price Trends, Price and Price Policy**

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಈ ಹಿಂದೆ ಬೆಲೆಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಈ ಸಭೆಯಲ್ಲಿ ಮತ್ತು ಪೇಲ್ಮೆನೆಯಲ್ಲಿ ಅನೇಕ ಸಂದರ್ಭದಲ್ಲಿ ಕಳವಳವನ್ನು ವ್ಯಕ್ತಪಡಿಸಿದ್ದಾರೆ ಮತ್ತು ಹೀಗೆ ಬೆಲೆಗಳು ಏರತಕ್ಕದ್ದರಿಂದ ಜನಸಾಮಾನ್ಯರಿಗೆ ಬಹಳ ತೊಂದರೆಯಾಗಿದೆ ಎನ್ನುವ ಬಗ್ಗೆ ಕೂಡ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ನಾನು ಆದಕ್ಕಾಗಿ ಈ ಸಭೆಗೆ ಒಂದು ಹೇಳಿಕೆಯನ್ನು ಸರ್ಕಾರದ ವತಿಯಿಂದ ಕೊಡಬೇಕು ಎಂದು ಅಪೇಕ್ಷೆಪಟ್ಟು ತಮ್ಮ ಅಪ್ಪಣೆಯನ್ನು ಪಡೆದು ನಿಂತಿದ್ದೇನೆ.

ಬೆಲೆಗಳು ಸರ್ಕಾರದ ಕೈಯಲ್ಲಿಲ್ಲ. ಆದು ಬಹು ಮಟ್ಟಿಗೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದ ನೀತಿಯನ್ನು ಅವಲಂಬಿಸಿರತಕ್ಕದ್ದು. ಆದರೂ ನನ್ನ ಈ ಹೇಳಿಕೆಯಲ್ಲಿ ಎರಡೂ ಸರ್ಕಾರದ ಬಗ್ಗೆ ಯಾವ ಪ್ರಮಾಣದಲ್ಲಿ ಚರ್ಚಿಸಬಹುದೋ ಆ ಪ್ರಮಾಣದಲ್ಲಿ ಚರ್ಚೆ ಮಾಡಿ ತಮಗೆ ಕೊಟ್ಟಿರತಕ್ಕ ಹೇಳಿಕೆಯಲ್ಲಿ ಅದನ್ನು ಸ್ಪಷ್ಟಪಡಿಸುವುದಕ್ಕೆ ನಾನು ಪ್ರಯತ್ನ ಪಟ್ಟಿದ್ದೇನೆ. ಮಾನ್ಯ ಸಭ್ಯಾಕ್ಷರೆ,

ಇತ್ತೀಚಿನ ಬೆಲೆ ಏರಿಕೆ ಬಗ್ಗೆ ಈ ಸಭೆಯ ಅನೇಕ ಸದಸ್ಯರು ಕಳವಳಗೊಂಡಿದ್ದು, ಆ ವಿಚಾರದಲ್ಲಿ ಅನೇಕ ಪ್ರಶ್ನೋತ್ತರಗಳಾಗಿವೆ. ಇವೆಲ್ಲ ಬಹುಮಟ್ಟಿಗೆ ಸಂಬಂಧಪಟ್ಟ ಇಲಾಖೆಗಳ ಧೋರಣೆ ಮತ್ತು ಬೆಲೆ ಹತೋಟಿಗೊಳಿಸುವುದಕ್ಕಾಗಿ ಕೈಗೊಂಡ ಆಡಳಿತ ಕ್ರಮಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿವೆ ಎಂಬುದಕ್ಕೆ ಮಾತ್ರ ಸಂಬಂಧಪಟ್ಟಿವೆ. ಬೆಲೆಗಳ ಪ್ರವೃತ್ತಿಯ ವ್ಯಾಪಕವಾದ ವಿಶ್ಲೇಷಣೆ ಹಾಗೂ ಬೆಲೆಗಳ ಬಗ್ಗೆ ಸರಕಾರದ ಸಮಗ್ರ ನೀತಿಯನ್ನು ಈವರೆಗೆ ಸಭೆಯ ಮುಂದಿಟ್ಟಿಲ್ಲವಾದ್ದರಿಂದ ಇಂದು ಈ ಹೇಳಿಕೆಯನ್ನು ನೀಡುತ್ತಿದ್ದೇನೆ.

ಆರ್ಥಿಕ ಅಭಿವೃದ್ಧಿಯೊಂದಿಗೆ ಹೆಚ್ಚು ವರಮಾನ, ಹೆಚ್ಚು ಉದ್ಯೋಗಾವಕಾಶ ಮತ್ತು ಹೆಚ್ಚು ಬೆಲೆಗಳು ಹೊಂದಿಕೊಂಡು ಬರುತ್ತವೆ. ಯೋಜನಾಬದ್ಧ ಅಭಿವೃದ್ಧಿ ಸಾಧನೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ವರಮಾನ, ಹೆಚ್ಚುತ್ತಿರುವ ಸರಕುಗಳ ಪೂರೈಕೆ ಮತ್ತು ಹೆಚ್ಚು ಸೇವಾ ವ್ಯವಸ್ಥೆಗಳ ನಡುವೆ ಹೊಂದಾಣಿಕೆಯನ್ನು ಇರಿಸಿಕೊಂಡು ಬರಲಾಗುವುದು. ಇದರಿಂದ ಬೆಲೆಗಳ ಸ್ಥಿಮಿತಕ್ಕೆ ಸಹಾಯವಾಗುತ್ತದೆ. ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಹೋಗುವ ಆರ್ಥಿಕ ವ್ಯವಸ್ಥೆಯಲ್ಲಿ ಬೆಲೆಗಳು ಬದಲಾಗುವುದೇ ಇಲ್ಲ ಎಂದು ಇದರಿಂದ ಅರ್ಥಮಾಡಲಾಗದು. ಅಭಿವೃದ್ಧಿಯ ಮಟ್ಟದ ಲ್ಲಾಗುವ ಬದಲಾವಣೆಗೆ ಅನುಸಾರವಾಗಿ, ಬೆಲೆಗಳ ಸ್ಥಿಮಿತವಾಗುವ ಮಟ್ಟವೂ ಕೂಡ ಬದಲಾಗುತ್ತವೆ. ಬೆಲೆಗಳ ಹೊಸಮಟ್ಟ ಅಭದ್ರವಾಗಿರಕೂಡದೆಂದು ಇದರ ಅರ್ಥ. ಬೆಲೆ ಏರಿಕೆಗಿಂತ ವರಮಾನದ ಪ್ರಮಾಣ ಹೆಚ್ಚಾದರೆ ಆಗ ನಿಜವಾದ ವರಮಾನ ಹೆಚ್ಚಾದಂತೆ. ಆದರೆ ವರಮಾನ ಬೆಲೆ ಏರಿಕೆಗೆ ಸಮಾನವಾಗಿ ಹೆಚ್ಚದಿದ್ದರೆ, ನಿಜವಾದ ವರಮಾನ ಕಡಿಮೆಯಾಗಿ ಕಷ್ಟಕರ ಪರಿಸ್ಥಿತಿ ಉಂಟಾಗುತ್ತದೆ. ಹೀಗಾದಾಗ ನಿಶ್ಚಿತವಾದ ಹಾಗೂ ಕಡಿಮೆ ಆದಾಯ ಬರುವ ವರ್ಗದ ಜನ ಅತಿ ಹೆಚ್ಚಿನ ಕಷ್ಟಕ್ಕೀಡಾಗುತ್ತಾರೆ. ಏಕೆಂದರೆ, ಅವರು ಸಂಪಾದಿಸುವ ಹಣದಿಂದ ಮೊದಲಿಗಿಂತ ಕಡಿಮೆ ಸರಕುಗಳು ದೊರಕುತ್ತವೆ. ಹೆಚ್ಚುತ್ತಿರುವ ಬೆಲೆಗಳಿಂದಾಗಿ ವೆಚ್ಚವನ್ನು ಸರಿತೂಗಿಸಲು